# ರಾಮಕೃಷ್ಣ ಮಿಷನ್: ೧೨೫ ವರ್ಷಗಳ ಸಂಭ್ರಮದಲ್ಲಿ

**ಸ್ವಾಮಿ ವೀರೇಶಾನಂದ**

೧೯ನೇ ಶತಮಾನದಲ್ಲಿ ಭಾರತೀಯ ಆಧ್ಯಾತ್ಮಿಕ ಇತಿಹಾಸದಲ್ಲಿ ನಡೆದ ಒಂದು ಮಹತ್ತರ ಘಟನೆಯೇ ಶ್ರೀರಾಮಕೃಷ್ಣ ಮಠ ಮತ್ತು ಮಿಷನ್ನಿನ ಸ್ಥಾಪನೆ. ಪ್ರಪಂಚದಾದ್ಯಂತ ಹೊಸ ಆಧ್ಯಾತ್ಮಿಕ ವಾಹಿನಿಯನ್ನು ಹರಿಸುವಲ್ಲಿ ಈ ಸಂಘದ ಪಾತ್ರ ಅತ್ಯಂತ ಮುಖ್ಯವಾದದ್ದು. ರಾಮಕೃಷ್ಣ ಮಠ ಮತ್ತು ಮಿಷನ್ನಿನ ಸ್ಥಾಪನೆಯ ೧೨೫ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಈ ವಿಶೇಷ ಲೇಖನವನ್ನು ಪ್ರಕಟಿಸುತ್ತಿದ್ದೇವೆ. ಲೇಖಕರು 'ವಿವೇಕಪ್ರಭ'ದ ಹಿಂದಿನ ಸಂಪಾದಕರು; ಪ್ರಸ್ತುತ ರಾಮಕೃಷ್ಣ ಮಹಾಸಂಘದ ಆಂಗ್ಲ ಮಾಸಪತ್ರಿಕೆ 'ಪ್ರಬುದ್ಧ ಭಾರತ'ದ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



ರಾಮಕೃಷ್ಣ ಮಹಾಸಂಘವು ಅವಳಿ ಸಂಘಟನೆಗಳ ಒಕ್ಕೂಟ. ಒಂದು ರಾಮಕೃಷ್ಣ ಮಠ. ಶ್ರೀರಾಮಕೃಷ್ಣರ ನಿರ್ಯಾಣಾನಂತರ ಅವರ ಶಿಷ್ಯರು ಸ್ವಾಮಿ ವಿವೇಕಾನಂದರ ನೇತೃತ್ವದಲ್ಲಿ ಬಾರಾನಗರ ಮಠವನ್ನು ಸ್ಥಾಪಿಸಿಕೊಂಡರು. ಧ್ಯಾನ, ತಪಸ್ಸುಗಳ ಅದ್ಭುತ ಜೀವನವನ್ನು ನಡೆಸಿದರು. ಮೊದಲಬಾರಿಗೆ ಶ್ರೀರಾಮಕೃಷ್ಣರ ಪೂಜೆ ಅಲ್ಲಿಯೇ ಆರಂಭವಾಯಿತು. ಹಾಗೆಯೇ ಹಲವಾರು ಶಾಖಾ ಕೇಂದ್ರಗಳು ಚೆನ್ನೈ, ವಾರಾಣಸಿ ಮೊದಲಾದ ಕಡೆಗಳಲ್ಲಿ ಹುಟ್ಟಿಕೊಂಡವು. ಇನ್ನು ರಾಮಕೃಷ್ಣ ಮಿಷನ್. ಈ ಪುಣ್ಯಸಂಸ್ಥೆಯು ಸಂನ್ಯಾಸಿಗಳು ಮತ್ತು ಭಕ್ತರು ಒಡಗೂಡಿ ನಡೆಸುವ ಸೇವಾಸಂಸ್ಥೆ. ಇದು ಜನ್ಮತಾಳಿದ್ದು ೧೮೯೭ರ ಮೇ ೧ರಂದು. ಕೊಲ್ಕತ್ತಾದ ಬಲರಾಮ ಬಸು ಎಂಬ ಶ್ರೀರಾಮಕೃಷ್ಣರ ಶಿಷ್ಯರ ಮನೆಯಲ್ಲಿ ನೆರೆದ ಸಭೆಯೊಂದರಲ್ಲಿ. ಈಗ ಈ ಮಹಾನ್ ಸಂಸ್ಥೆಗೆ ೧೨೫ ವರ್ಷಗಳ ಸಂಭ್ರಮ. ಇದನ್ನು ರಾಮಕೃಷ್ಣ ಮಹಾಸಂಘವು ೨೦೨೨ರ ರಿಂದ ಮೇ ತಿಂಗಳಿನಿಂದ – ೨೦೨೩ರ ಮೇ ತಿಂಗಳವರೆಗೆ ವಿವಿಧ ಕಾರ್ಯಕ್ರಮಗಳ ಮೂಲಕ ಆಚರಿಸುತ್ತಿದೆ.

### ಸಂಘರೂಪಿ ರಾಮಕೃಷ್ಣ

ರಾಮಕೃಷ್ಣ ಮಹಾಸಂಘವು ಶ್ರೀರಾಮಕೃಷ್ಣರ ಭೌತಿಕ ರೂಪವೇ ಆಗಿದೆ. ಸ್ವಾಮಿ ವಿವೇಕಾನಂದರು ಹೇಳುವಂತೆ, ಶ್ರೀ ರಾಮಕೃಷ್ಣರೇ ಈ ಪುಣ್ಯಸಂಸ್ಥೆಯ ರೂಪದಲ್ಲಿ ಇಂದಿಗೂ ನೆಲೆಸಿದ್ದಾರೆ. ಹೀಗಾಗಿ ರಾಮಕೃಷ್ಣ ಮಿಷನ್ ಎಂದರೆ ತಾತ್ತ್ವಿಕವಾಗಿ ಶ್ರೀರಾಮಕೃಷ್ಣರೇ. ಅದು ನಡೆಸುತ್ತಿರುವ ಶಾಲಾಕಾಲೇಜುಗಳು, ವೈದ್ಯಕೀಯ ಕೇಂದ್ರಗಳು, ಪರಿಹಾರ ಕಾರ್ಯಕ್ರಮಗಳು, ಭವ್ಯ ಕಟ್ಟಡಗಳು, ಅನೇಕ ರೀತಿಯ ವಿಭಿನ್ನ ಸೇವಾ ಚಟುವಟಿಕೆಗಳು – ಇವೆಲ್ಲವೂ ಅದರ ವಿವಿಧ ಅಭಿವ್ಯಕ್ತಿಗಳು ಮಾತ್ರ. ಶ್ರೀರಾಮಕೃಷ್ಣರು 'ಜೀವಿಯನ್ನು ಶಿವನೆಂದು ಕಂಡು ಅವನ ಸೇವೆಯನ್ನು ಮಾಡು' ಎಂದು ಹೇಳುತ್ತಿದ್ದರು. ಸ್ವಾಮಿ ವಿವೇಕಾನಂದರು ಇದನ್ನೇ 'ಮಾನವ ರೂಪದಲ್ಲಿರುವ ಭಗವಂತನನ್ನು ಪೂಜೆ ಮಾಡು' ಎಂದು ಹೇಳಿದರು. ಈ ಆದರ್ಶದ ಪ್ರತಿರೂಪವೇ ರಾಮಕೃಷ್ಣ ಮಿಷನ್.

### ಧ್ಯೇಯ

ಶ್ರೀರಾಮಕೃಷ್ಣರ ಹೆಸರಿನಲ್ಲಿ ಆರಂಭವಾಗಿರುವ ಮಠವು ಹೊಸ ರೀತಿಯ ಸಂನ್ಯಾಸಿ ಸಂಪ್ರದಾಯದ ಪ್ರವರ್ತಕವಾಗಬೇಕು ಎಂದು ಸ್ವಾಮಿ ವಿವೇಕಾನಂದರು ಬಯಸಿದ್ದರು. ಈ ವಿಷಯದಲ್ಲಿ ಅವರು ಬಹಳ ದೀರ್ಘವಾಗಿ ಚಿಂತಿಸಿದರು. ಸಾಂಪ್ರದಾಯಿಕ ಹಿಂದೂ ಸಂನ್ಯಾಸಿಗಳು ಧ್ಯಾನ, ತಪಸ್ಸು ಮತ್ತು ಅಧ್ಯಯನಗಳನ್ನು ಒಳಗೊಂಡ ಏಕಾಂತ ಜೀವನವನ್ನು ನಡೆಸುತ್ತಾರೆ. ಇದರ ಜೊತೆ ಜೊತೆಗೇ ರಾಮಕೃಷ್ಣ ಸಂಪ್ರದಾಯಕ್ಕೆ ಸೇರಿದ ಸಂನ್ಯಾಸಿಗಳು ಜಗತ್ತಿನ ಹಿತವನ್ನು ಮಾಡುವ ಸೇವಾಕಾರ್ಯಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಳ್ಳಬೇಕು ಎನ್ನುವುದು ಸ್ವಾಮೀಜಿಯವರ ಆಶಯವಾಗಿತ್ತು. ಈ ಕರ್ಮಯೋಗದ ಮೂಲಕ ಚಿತ್ತಶುದ್ಧಿಯನ್ನು ಮಾಡಿಕೊಂಡಾಗ, ಆಧ್ಯಾತ್ಮಿಕ ಸಾಧನೆಗೆ ಇಂಬು ಸಿಗುತ್ತದೆ; ಇದರಿಂದ ಸಾಧಕನಿಗೆ ಮೋಕ್ಷದ ದಾರಿ ಸುಗಮವಾಗುತ್ತದೆ ಮತ್ತು ಜಗತ್ತಿನ ಹಿತವೂ ಆಗುತ್ತದೆ ಎಂಬ ವಿನೂತನ ಸಂನ್ಯಾಸಿ ಆದರ್ಶವನ್ನು ಸ್ವಾಮೀಜಿ ಪ್ರತಿಪಾದಿಸಿದರು. ಇದನ್ನು ರಾಮಕೃಷ್ಣ ಮಹಾಸಂಘದ ಧ್ಯೇಯವಾಕ್ಯವಾದ '**ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ**' – 'ತನ್ನ ಮೋಕ್ಷಕ್ಕಾಗಿ ಮತ್ತು ಜಗತ್ತಿನ ಹಿತಕ್ಕಾಗಿ ಕೂಡ' ಎಂಬ ವಾಕ್ಯದಲ್ಲಿ ಸ್ಪಷ್ಟವಾಗಿ ಸೂಚಿಸಿರುವುದನ್ನು ನಾವು ಕಾಣಬಹುದು. ತನ್ನ ಸ್ವಂತ ಆಧ್ಯಾತ್ಮಿಕ ಸಾಧನೆ ಮತ್ತು ಜಗತ್ತಿನ ಹಿತಗಳಲ್ಲಿ ತಾರತಮ್ಯ ಮಾಡುವಂತಿಲ್ಲ. ಈ ಎರಡೂ ಧ್ಯೇಯಗಳನ್ನು ಸಂನ್ಯಾಸಿಯು ಒಟ್ಟೊಟ್ಟಿಗೇ ಸಾಧಿಸಬೇಕು. ಆ ಮೂಲಕ ತನ್ನ ಜೀವನವನ್ನು

ಸರ್ವಾಂಗ ಸುಂದರವನ್ನಾಗಿ ಮಾಡಿಕೊಳ್ಳಬೇಕು ಎಂಬುದೇ ಸ್ವಾಮಿ ವಿವೇಕಾನಂದರ ಕನಸಾಗಿತ್ತು. ಈ ಕನಸು ನನಸಾಗಿದ್ದು ರಾಮಕೃಷ್ಣ ಮಿಷನ್ ಎಂಬ ಸಂಸ್ಥೆಯ ಉಗಮದ ಮೂಲಕ.

### ಮೇ ೧, ೧೮೯೭

ಮೇಲಿನ ಸರ್ವೋಪಕಾರಿ ಆದರ್ಶವನ್ನು ಮೈಗೂಡಿಸಿಕೊಂಡ ಸಂನ್ಯಾಸಿಗಳು ಮತ್ತು ಭಕ್ತರನ್ನು ಒಳಗೊಂಡ ಸಂಸ್ಥೆಯನ್ನು ಹುಟ್ಟು ಹಾಕಬೇಕೆಂದು ಸ್ವಾಮಿ ವಿವೇಕಾನಂದರು ಇಚ್ಛಿಸಿದರು. ಇದರ ಬಗ್ಗೆ ಸಮಾಲೋಚನೆಯನ್ನು ಮಾಡಲು ಬಲರಾಮ ಬೋಸ್ ಅವರ ಗೃಹದಲ್ಲಿ ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರು ಮತ್ತು ನಿಕಟ ಭಕ್ತರ ಸಭೆಯೊಂದು ೧೮೯೭ರ ಮೇ ೧ರಂದು ಮಧ್ಯಾಹ್ನ ೩ ಗಂಟೆಗೆ ಜರುಗಿತು. ಅಲ್ಲಿ ನೆರೆದಿದ್ದ ಸುಮಾರು ೪೦ ಜನರಲ್ಲಿ ಸ್ವಾಮೀಜಿ ತಮ್ಮ ಚಿಂತನೆಗಳನ್ನು ಹಂಚಿಕೊಂಡರು. ಅಂದು ಅವರು ಮಾಡಿದ ಭಾಷಣದ ಸಂಕ್ಷಿಪ್ತ ರೂಪ ಹೀಗಿದೆ:

''ನಾನಾ ದೇಶಗಳನ್ನು ಸುತ್ತಿ ನನಗೆ ದೃಢವಾಗಿ ನಂಬುಗೆ ಹುಟ್ಟಿ ಹೋಗಿದೆ, ಏನೆಂದರೆ – ಸಂಘವಿಲ್ಲದೆ ಯಾವ ದೊಡ್ಡ ಕಾರ್ಯವೂ ನಡೆಯಲಾರದು. ಆದರೆ ನಮ್ಮದರಂಥ ದೇಶಗಳಲ್ಲಿ ಮೊದಲಿನಿಂದಲೂ ಸಾಧಾರಣ ರೀತಿಯಲ್ಲಿ ಸಂಘವನ್ನು ಏರ್ಪಡಿಸುವುದು ಅಥವಾ ಸಾಧಾರಣ ಜನರ ಸಮ್ಮತಿಯನ್ನು ತೆಗೆದುಕೊಂಡು ಕೆಲಸ ಮಾಡುವುದು ಅಷ್ಟು ಸುಲಭವೆಂದು ನನಗೆ ತೋರುವುದಿಲ್ಲ... ಈ ದೇಶದಲ್ಲಿ ಶಿಕ್ಷಣ ಪಸರಿಸಿ, ಅದರಿಂದ ಜನರು ಯಾವಾಗ ಮತಗಿತಗಳ ಕಿಷ್ಕಿಂಧವಾದ ಮೇರೆಗಳ ಹೊರಗೆ ಮನಸ್ಸು ಕೊಡುವುದನ್ನು ಕಲಿಯುತ್ತಾರೆಯೋ, ಆಗ ಪ್ರಜಾಭಿಪ್ರಾಯವನ್ನು ಅನುಸರಿಸಿ ಸಂಘದ ಕೆಲಸವು ನಡೆಯಬಲ್ಲುದು. ಅದಕ್ಕೋಸ್ಕರವಾಗಿಯೇ ಈ ಸಂಘಕ್ಕೆ ಒಬ್ಬ ಸರ್ವಾಧಿಕಾರಿ ಇರಬೇಕು. ಎಲ್ಲರೂ ಆತನ ಆಜ್ಞೆಗೆ ಗೌರವ ಕೊಟ್ಟುಕೊಂಡು ಹೋಗಬೇಕು. ಆಮೇಲೆ ಕ್ರಮೇಣ ಎಲ್ಲರ ಮತವನ್ನೂ ತಿಳಿದುಕೊಂಡು ಕಾರ್ಯವನ್ನು ಮಾಡಬಹುದು. ನಾನು ಯಾರ ಹೆಸರಿನಲ್ಲಿ ಸಂನ್ಯಾಸಿಯಾಗಿದ್ದೇನೆಯೋ, ತಾವು ಯಾರನ್ನು ಜೀವನಕ್ಕೆ ಆದರ್ಶವನ್ನಾಗಿಟ್ಟುಕೊಂಡು ಸಂಸಾರಾಶ್ರಮವನ್ನು ಸ್ವೀಕರಿಸಿ ಕಾರ್ಯಕ್ಷೇತ್ರದಲ್ಲಿರುವಿರೊ, ಯಾರ ಪುಣ್ಯ ನಾಮವೂ ಅದ್ಭುತ ಜೀವನವೂ ದೇಹಾವಸಾನವಾದ ಇಪ್ಪತ್ತು ವರ್ಷಗಳ ಒಳಗೆ ಪ್ರಾಚ್ಯ ಮತ್ತು ಪಾಶ್ಚಾತ್ಯ ಜಗತ್ತಿನಲ್ಲಿ ಆಶ್ಚರ್ಯಕರವಾದ ರೀತಿಯಲ್ಲಿ ಪ್ರಸಾರವಾಯಿತೋ, ಆತನ ಹೆಸರಿನಲ್ಲಿಯೇ ಈ ಸಂಘವು ಪ್ರತಿಷ್ಠಿತವಾಗುತ್ತದೆ. ನಾನು ಪ್ರಭುವಿನ ದಾಸ. ತಾವು ಈ ಕಾರ್ಯದಲ್ಲಿ ಸಹಾಯ ಮಾಡಬೇಕು.''

### ಮಿಷನ್ನಿನ ಸ್ಥಾಪನೆ

ಅಲ್ಲಿ ನೆರೆದಿದ್ದ ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರು ಮತ್ತು ಗಿರೀಶಚಂದ್ರ ಘೋಷ್, ಶರಚ್ಚಂದ್ರ ಚಕ್ರವರ್ತಿ ಮುಂತಾದ ಗೃಹಸ್ಥರು ಈ ಪ್ರಸ್ತಾಪವನ್ನು ಅನುಮೋದಿಸಿದರು. ತದನಂತರ, ಈ ಸಂಘದ ಕಾರ್ಯಪ್ರಣಾಳಿ ಏನಿರಬೇಕೆಂದು ಚರ್ಚೆಯಾಯಿತು. ಹಾಗೂ ಸಂಘಕ್ಕೆ ರಾಮಕೃಷ್ಣ ಪ್ರಚಾರ ಸಂಸ್ಥೆ ಅಥವಾ **ರಾಮಕೃಷ್ಣ ಮಿಷನ್** ಎಂಬ ಹೆಸರನ್ನು ನೀಡಲಾಯಿತು. ಹಾಗೆಯೇ ಇದರ ಧ್ಯೇಯಾದರ್ಶಗಳನ್ನು ಒಳಗೊಂಡ ಒಂದು ವಿಜ್ಞಾಪನಾ ಪತ್ರವನ್ನು ಮುದ್ರಿಸಿ, ಹಂಚಲಾಯಿತು. ಅದರ ಕೆಲವು ಭಾಗಗಳು ಹೀಗಿವೆ:

**ಉದ್ದೇಶ :** ಮಾನವಹಿತಾರ್ಥವಾಗಿ ಶ್ರೀರಾಮಕೃಷ್ಣ ಪರಮಹಂಸರು ಯಾವ ತತ್ತ್ವಗಳನ್ನು ವಿವರಿಸಿದರೊ ಮತ್ತು ತಮ್ಮ ಜೀವನದಲ್ಲಿ ಕಾರ್ಯರೂಪವಾಗಿ ಉದಾಹರಿಸಿದರೊ ಅವುಗಳ ಪ್ರಚಾರ ಮತ್ತು ಆ ತತ್ತ್ವಗಳನ್ನು ಅನುಭವಕ್ಕೆ ತಂದುಕೊಳ್ಳಲು ಸಹಕಾರಿಗಳಾದ ಮನುಷ್ಯನ ದೈಹಿಕ, ಮಾನಸಿಕ ಮತ್ತು ಪಾರಮಾರ್ಥಿಕ ಉನ್ನತಿಗಳಲ್ಲಿ ಸಹಾಯ ಮಾಡುವುದು ಈ ಮಿಷನ್ನಿನ ಉದ್ದೇಶ.

**ವ್ರತ:** ಜಗತ್ತಿನ ಎಲ್ಲ ಧರ್ಮ, ಮತಗಳೂ ಒಂದು ಅಕ್ಷಯ ಸನಾತನ ಧರ್ಮದ ರೂಪಾಂತರ ಮಾತ್ರ ಎಂಬ ಜ್ಞಾನದಿಂದ ಸಕಲ ಧರ್ಮಾನುಯಾಯಿಗಳಲ್ಲಿಯೂ ಆತ್ಮೀಯತೆಯನ್ನು ಇರಿಸುವುದಕ್ಕೋಸ್ಕರ ಶ್ರೀರಾಮಕೃಷ್ಣ ಪರಮಹಂಸರು ಯಾವ ಕಾರ್ಯವನ್ನು ಆರಂಭಿಸಿದರೋ, ಅದರ ಪರಿಚಾಲನೆಯೇ ಈ ಮಿಷನ್ನಿನ ವ್ರತ.

**ಕಾರ್ಯಕ್ರಮ:** ಮನುಷ್ಯನ ಸಾಂಸಾರಿಕ ಮತ್ತು ಆಧ್ಯಾತ್ಮಿಕ ಉನ್ನತಿಗೋಸ್ಕರ ವಿದ್ಯೆಯನ್ನು ದಾನ ಮಾಡುವುದಕ್ಕೆ ಉಪಯೋಗವಾಗುವಂತೆ ಜನರಿಗೆ ಶಿಕ್ಷಣವನ್ನು ಕೊಟ್ಟು ತಯಾರು ಮಾಡುವುದು; ಕುಶಲಕಲೆಗಳಲ್ಲಿಯೂ, ಕಷ್ಟಪಟ್ಟು ಕೆಲಸಮಾಡಬೇಕಾದ ಕಸುಬುಗಳಲ್ಲಿಯೂ ಉತ್ಸಾಹವನ್ನು ಹೆಚ್ಚಿಸುವುದು, ಮತ್ತು ಇತರ ಧರ್ಮಗಳ ಯಾವ ಭಾವನೆಗಳು ಶ್ರೀರಾಮಕೃಷ್ಣರ ಜೀವನದಲ್ಲಿ ಹೇಗೆ ವಿವರಿಸಲ್ಪಟ್ಟವೋ, ಅವುಗಳು ಜನಜೀವನದಲ್ಲಿ ಪ್ರವರ್ತಿಸುವಂತೆ ಮಾಡುವುದು.

**ಭರತಖಂಡದಲ್ಲಿನ ಕಾರ್ಯ:** ಭರತಖಂಡದ ಪ್ರತಿ ನಗರದಲ್ಲಿಯೂ ಬೋಧಕರಾಗಲು ಇಚ್ಛಿಸುವ ಗೃಹಸ್ಥ ಮತ್ತು ಸಂನ್ಯಾಸಿಗಳಿಗೆ ಶಿಕ್ಷಣ ನೀಡಲು ಆಶ್ರಮಗಳನ್ನು ಸ್ಥಾಪಿಸುವುದು ಮತ್ತು ಅವರು ಯಾವ ರೀತಿಯಲ್ಲಿ ದೇಶದೇಶಾಂತರಗಳಿಗೆ ಹೋಗಿ ಜನಗಳನ್ನು ಶಿಕ್ಷಿತರನ್ನಾಗಿ ಮಾಡಲು ಸಾಧ್ಯವೋ ಅದನ್ನು ಕೈಗೊಳ್ಳುವುದು.

**ವಿದೇಶೀಯ ಕಾರ್ಯವಿಭಾಗ :** ಭರತಖಂಡದ ಹೊರಗಿರುವ ಪ್ರದೇಶಗಳಲ್ಲಿ ಜನರು ವ್ರತಧಾರಿಗಳಾಗುವಂತೆ ಪ್ರೇರೇಪಿಸುವುದು ಮತ್ತು ಆಯಾ ದೇಶಗಳಲ್ಲಿ ಸ್ಥಾಪಿಸಲ್ಪಟ್ಟ ಆಶ್ರಮಗಳೊಂದಿಗೆ ಭಾರತೀಯ ಆಶ್ರಮಗಳಿಗೆ ನಿಕಟ ಸಂಬಂಧವೂ ಸಹಾನುಭೂತಿಯೂ ಬೆಳೆಯುವಂತೆ ಮಾಡುವುದು ಮತ್ತು ಹೊಸ ಆಶ್ರಮಗಳನ್ನು ಸ್ಥಾಪಿಸುವುದು.

ಈ ರೀತಿ ಹತ್ತುಹಲವು ಧ್ಯೇಯೋದ್ದೇಶಗಳನ್ನು ಒಳಗೊಂಡ ಸಂಸ್ಥೆಯ ಸಮಿತಿಯೊಂದನ್ನು ರಚಿಸಲಾಯಿತು. ಇದಕ್ಕೆ ಸ್ವಾಮಿ ವಿವೇಕಾನಂದರೇ ಸ್ವತಃ ಅಧ್ಯಕ್ಷರಾದರು. ಸ್ವಾಮಿ ಬ್ರಹ್ಮಾನಂದರು ಕೊಲ್ಕತ್ತಾ ಕೇಂದ್ರಕ್ಕೆ ಅಧ್ಯಕ್ಷರಾದರು ಹಾಗೂ ಸ್ವಾಮಿ ಯೋಗಾನಂದರು ಅವರ ಸಹಕಾರಿಗಳಾದರು. ಅಟಾರ್ನಿಗಳಾದ ಬಾಬು ನರೇಂದ್ರನಾಥ ಮಿತ್ರರು ಈ ಸಮಿತಿಯ ಕಾರ್ಯದರ್ಶಿಗಳಾದರು. ಡಾಕ್ಟರ್ ಶಶಿಭೂಷಣ ಘೋಷ್ ಮತ್ತು ಶರಚ್ಚಂದ್ರ ಸರ್ಕಾ

ರರು ಉಪ ಕಾರ್ಯದರ್ಶಿಗಳಾದರು. ಸ್ವಾಮಿ ವಿವೇಕಾನಂದರ ಶಿಷ್ಯರಾದ ಶರತ್‌ಚಂದ್ರ ಚಕ್ರವರ್ತಿ ಅವರು ಶಾಸ್ತ್ರ ವಾಚಕರಾಗಿ ಆಯ್ಕೆಯಾದರು. ಈ ಸಂಸ್ಥೆಯು ಪ್ರತಿ ಭಾನುವಾರ ನಾಲ್ಕು ಗಂಟೆಗೆ ಬಲರಾಮ ಬೋಸರ ಮನೆಯಲ್ಲಿ ಸೇರಬೇಕೆಂಬ ನಿಯಮವನ್ನು ಕೂಡ ಮಾಡಲಾಯಿತು. ಮೂರು ವರ್ಷಗಳ ಕಾಲ ನಿಯಮಿತ ವಾಗಿ ಸಮಿತಿಯ ಸಭೆಗಳು ಈ ರೀತಿಯಲ್ಲಿ ನಡೆದವು. ಸ್ವಾಮಿ ವಿವೇಕಾನಂದರು ಎರಡನೆಯ ಸಲ ವಿದೇಶಗಳಿಗೆ ಹೋಗುವ ತನಕ, ತಮಗೆ ಸಾಧ್ಯವಾದಾಗಲೆಲ್ಲ ಈ ಸಭೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಪ್ರವಚನಗಳನ್ನು ನೀಡುವುದಲ್ಲದೆ, ತಮ್ಮ ಮೋಹಕ ಧ್ವನಿಯಲ್ಲಿ ಭಕ್ತಿಗೀತೆಗಳನ್ನು ಹಾಡಿ, ಸಭಿಕರನ್ನು ಮುಗ್ಧರನ್ನಾಗಿ ಮಾಡುತ್ತಿದ್ದರು.

### ರಾಮಕೃಷ್ಣ ಮಿಷನ್ನಿನ ಕಾರ್ಯವ್ಯಾಪಕತೆ

ರಾಮಕೃಷ್ಣ ಮಿಷನ್ ತನ್ನ ೨೨೫ಕ್ಕೂ ಹೆಚ್ಚು ಕೇಂದ್ರಗಳ ಮೂಲಕ ದೇಶವಿದೇಶಗಳಲ್ಲಿ ಅನೇಕ ಸೇವಾಕಾರ್ಯಗಳನ್ನು ನಡೆಸು ತ್ತಿದೆ. ಅವುಗಳನ್ನು ಹೀಗೆ ವಿಭಾಗಿಸಬಹುದು : ೧. **ಆಧ್ಯಾತ್ಮಿಕ ೨. ಶೈಕ್ಷಣಿಕ ೩. ವೈದ್ಯಕೀಯ ೪. ಪರಿಹಾರ ಕಾರ್ಯ ೫. ಬಡತನ ನಿರ್ಮೂಲನ. ೬. ಬೋಧನೆ ಮತ್ತು ಪುಸ್ತಕ ಪ್ರಕಾಶನ.** ರಾಮಕೃಷ್ಣ ಮಿಷನ್ನಿನ ಶಾಲಾಕಾಲೇಜುಗಳು ತಮ್ಮ ಉನ್ನತ ಮಟ್ಟದ ಶಿಕ್ಷಣಕ್ಕಾಗಿ ಮತ್ತು ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಪ್ರಸಾರಕ್ಕಾಗಿ ಪ್ರಸಿದ್ಧ ವಾಗಿವೆ. ಇವು ಒಬ್ಬ ವಿದ್ಯಾರ್ಥಿಯು ಸಮರ್ಥ ಪ್ರಜೆಯಾಗಲು ಬೇಕಾದ ಉತ್ತಮ ಪರಿಸರ, ಪರಿಕರಗಳು ಮತ್ತು ಬೋಧನೆಯ ವ್ಯವಸ್ಥೆಯನ್ನು ಒದಗಿಸುತ್ತವೆ. ಹೀಗಾಗಿ ಈ ಶಿಕ್ಷಣಸಂಸ್ಥೆಗಳಲ್ಲಿ ಉತ್ತೀರ್ಣರಾದವರು ಒಳ್ಳೆಯ ಅಂಕಗಳನ್ನು ಪಡೆದುಕೊಳ್ಳುವುದರ ಜೊತೆಗೆ ಉತ್ತಮ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಬೆಳೆಸಿಕೊಳ್ಳು ತ್ತಾರೆ. ಹಾಗೆಯೇ ರಾಮಕೃಷ್ಣ ಮಿಷನ್ ಕೆಲವು ಕಡೆಗಳಲ್ಲಿ ಬೃಹತ್ ವೈದ್ಯಕೀಯ ಕೇಂದ್ರಗಳನ್ನೂ, ಹಾಗೆಯೇ ಹಲವಾರು ಕಡೆಗಳಲ್ಲಿ ಮಧ್ಯಮ ಮತ್ತು ಸಣ್ಣ ಪ್ರಮಾಣದಲ್ಲಿ ವೈದ್ಯಕೀಯ ಸೇವಾಕೇಂದ್ರ ಗಳನ್ನೂ ನಡೆಸುತ್ತಿದೆ. ಇವುಗಳಲ್ಲಿ ಸಮಾಜದ ನಿಮ್ನವರ್ಗದ ಜನರು ಕಡಮೆ ಖರ್ಚಿನಲ್ಲಿ ಅಥವಾ ಉಚಿತವಾಗಿ ಚಿಕಿತ್ಸೆಯನ್ನು ಪಡೆಯು ತ್ತಾರೆ. ಈ ಸೇವೆಗಳನ್ನು ಒದಗಿಸಲು ಮಿಷನ್ ಪ್ರತಿ ವರ್ಷವೂ ಕೋಟ್ಯಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದೆ. ಹಾಗೆಯೇ ರಾಮಕೃಷ್ಣ ಮಿಷನ್ ಪ್ರಾಕೃತಿಕ ವಿಪತ್ತಿನ ಸಮಯಗಳಲ್ಲಿ ಜನರಿಗೆ ಅಗತ್ಯವಾದ ಪರಿಹಾರವನ್ನು ಒದಗಿಸುತ್ತದೆ. ಇದೇ ರೀತಿ ಸಂತ್ರಸ್ತ ರಾದ ಜನರ ಬಾಳನ್ನು ಕಟ್ಟಿಕೊಡಲು, ಮನೆಗಳ ನಿರ್ಮಾಣ ಕಾರ್ಯವನ್ನೂ ಆಯೋಜಿಸುತ್ತದೆ. ರಾಮಕೃಷ್ಣ ಮಿಷನ್ನಿನ ಅಡಿ ಯಲ್ಲಿ ಬರುವ ಹಲವಾರು ಕಾರ್ಯಕ್ರಮಗಳ ಮೂಲಕ ಲಕ್ಷಾಂತರ ಬಡಜನರಿಗೆ ಸ್ವಾವಲಂಬಿಗಳಾಗಲು ತರಬೇತಿಯನ್ನು ಒದಗಿಸಲಾ ಗಿದೆ; ಆರ್ಥಿಕ ನೆರವನ್ನೂ ನೀಡಲಾಗಿದೆ. ಹಾಗೆಯೇ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಆಶ್ರಮಗಳು ಭಾರತದ ಎಲ್ಲ ಅಧಿಕೃತ ಭಾಷೆಗಳಲ್ಲಿ ರಾಮಕೃಷ್ಣ-ವಿವೇಕಾನಂದ-ವೇದಾಂತ ಭಾವಧಾರೆಯ ಗ್ರಂಥಗಳನ್ನು ಪ್ರಕಟಿಸುತ್ತಿವೆ. ಇದಲ್ಲದೆ ಎಲ್ಲ ಭಾಷೆಗಳಲ್ಲಿ ಮಾಸ ಪತ್ರಿಕೆಗಳನ್ನು ಹೊರತರುತ್ತಿದೆ. ಮಿಷನ್ನಿನ ಸಂನ್ಯಾಸಿಗಳು ವ್ಯಾಪಕ ರೀತಿಯಲ್ಲಿ ಬೋಧನೆ, ಪ್ರವಚನ ಕಾರ್ಯಗಳನ್ನು ಕೂಡ ಹಮ್ಮಿ ಕೊಂಡಿದ್ದಾರೆ. ವಿದೇಶಗಳಲ್ಲಿರುವ ಆಶ್ರಮಗಳಲ್ಲಿ ಇದನ್ನು ವಿಶೇಷ ವಾಗಿ ಕೈಗೊಳ್ಳಲಾಗುತ್ತಿದೆ.

ಜಗತ್ತಿನಾದ್ಯಂತ ಇರುವ ರಾಮಕೃಷ್ಣ ಮಿಷನ್ನಿನ ಆಶ್ರಮಗಳಲ್ಲಿ ಮೇಲಿನ ಎಲ್ಲ ಸೇವಾಕಾರ್ಯಗಳು ಕೂಡ ಸುವ್ಯವಸ್ಥಿತವಾಗಿ ನಡೆದು ಕೊಂಡು ಬರುತ್ತಿವೆ. ರಾಮಕೃಷ್ಣ ಮಿಷನ್ನಿನ ಆಡಳಿತದ ವೈಖರಿ ಯನ್ನು ಮತ್ತು ಮಾನವ ನಿರ್ವಹಣೆಯನ್ನು ಅನೇಕ ಪರಿಣತರು ಕೊಂಡಾಡಿದ್ದಾರೆ. ಅವರಲ್ಲಿ ಒಬ್ಬರಂತೂ, ದೊಡ್ಡ ದೊಡ್ಡ ಕಂಪನಿ ಗಳನ್ನು ನಡೆಸುವುದಕ್ಕೆ ರಾಮಕೃಷ್ಣ ಮಿಷನ್ನಿನ ನಿರ್ವಹಣಾ ವಿಧಾ ನವು ಮಾದರಿಯಾಗಿದೆ ಎಂದು ಹೇಳುತ್ತಾರೆ. ಮಿಷನ್ ತನ್ನಲ್ಲಿರುವ ಅಲ್ಪ ಮಾನವ ಮತ್ತು ಆರ್ಥಿಕ ಸಂಪನ್ಮೂಲದಲ್ಲಿಯೇ ಲಕ್ಷಾಂತರ ಜನರ ಜೀವನದ ದೆಶೆಯನ್ನೇ ಪರಿವರ್ತಿಸುವ ಪುಣ್ಯಕಾರ್ಯವನ್ನು ಸದ್ದುಗದ್ದಲವಿಲ್ಲದೆ, ಪ್ರಚಾರದ ಆಡಂಬರವಿಲ್ಲದೆ, ಲೇಶಮಾತ್ರ ರಾಜಕೀಯದ ಸಂಪರ್ಕವೂ ಇಲ್ಲದೆ ಕೈಗೊಳ್ಳುತ್ತಿದೆ.

### ರಾಮಕೃಷ್ಣ ಮಿಷನ್ನಿನ ವೈಶಿಷ್ಟ್ಯತೆ

ವೇದಾಂತವು ಇಡೀ ವಿಶ್ವದಲ್ಲೆಲ್ಲ ಬ್ರಹ್ಮಚೈತನ್ಯವು ವ್ಯಾಪಿಸಿ ಕೊಂಡಿದೆ ಎಂದು ಹೇಳುತ್ತದೆ. ಅದೇ ರೀತಿ ಶ್ರೀರಾಮಕೃಷ್ಣ ಚೈತ ನ್ಯವು ರಾಮಕೃಷ್ಣ ಮಿಷನ್ನಿನ ಎಲ್ಲ ಕಾರ್ಯಚಟುವಟಿಕೆಗಳನ್ನೂ, ಬಾಹ್ಯರೂಪಗಳನ್ನೂ ಸರ್ವತ್ರ ವ್ಯಾಪಿಸಿಕೊಂಡಿದೆ. ಅದಕ್ಕೆಂದೇ ಸ್ವಾಮಿ ವಿವೇಕಾನಂದರು 'ಶ್ರೀರಾಮಕೃಷ್ಣರು ಭೌತಿಕವಾಗಿ ಕೂಡ ಇನ್ನೂ ಜೀವಿಸಿದ್ದಾರೆ. ರಾಮಕೃಷ್ಣ ಮಹಾಸಂಘವು ಅವರ ಭೌತಿಕ ಶರೀರವೇ ಸರಿ' ಎಂದು ಹೇಳಿದ್ದಾರೆ. ಇದೇ ರೀತಿಯಲ್ಲಿ, ರಾಮಕೃಷ್ಣ ಮಿಷನ್ನಿನಲ್ಲಿ ನಡೆಸಲಾಗುವ ಸೇವಾಕಾರ್ಯಗಳನ್ನು ಶ್ರೀರಾಮ ಕೃಷ್ಣರ ಪೂಜಾಕೈಂಕರ್ಯವೆಂದೇ ತಿಳಿದು ಸಂನ್ಯಾಸಿಗಳು, ಅತ್ಯಂತ ಮುತುವರ್ಜಿ ಮತ್ತು ಕಾಳಜಿಗಳಿಂದ ನಿರ್ವಹಿಸುತ್ತಾರೆ. ಈ ಸಮಯದಲ್ಲಿ ಶ್ರದ್ಧೆ, ಭಕ್ತಿ, ತಪಸ್ಯೆಯ ಭಾವನೆಗಳು ಅವರ ಮನ ಸ್ಸನ್ನು ತುಂಬಿರುತ್ತವೆ. ಹೀಗೆ ಈ ಎಲ್ಲ ಕೆಲಸಕಾರ್ಯಗಳು ಸೇವೆಯ ರೂಪವನ್ನು ಪಡೆದುಕೊಳ್ಳುತ್ತವೆ; ಆಧ್ಯಾತ್ಮಿಕ ಸಾಧನೆಯೇ ಆಗುತ್ತವೆ. ಸರಿಯಾದ ಮನೋಭಾವದಿಂದ ಮಾಡುವ ಎಲ್ಲ ಸೇವಾಕಾರ್ಯ ಗಳೂ ಆಧ್ಯಾತ್ಮಿಕ ಸಾಧನೆಗಳೇ ಎಂಬ ಮನೋಭಾವನೆಯನ್ನು ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳು ಬೆಳೆಸಿಕೊಳ್ಳುತ್ತಾರೆ. ಈ ರೀತಿ ಅವರು ತಮ್ಮ ಜೀವನವನ್ನು ನಡೆಸಿ ಕೃತಾರ್ಥರಾಗುತ್ತಾರೆ.

### ರಾಮಕೃಷ್ಣ ಮಿಷನ್ನಿನ ಆದರ್ಶಗಳು

ರಾಮಕೃಷ್ಣ ಮಿಷನ್ನಿನ ಆಧ್ಯಾತ್ಮಿಕ ಮತ್ತು ಸೇವಾ ಆದರ್ಶ ಗಳನ್ನು ಸಮಾಜದ ಎಲ್ಲರೂ ಮೈಗೂಡಿಸಿಕೊಳ್ಳಬೇಕು. ಇದಕ್ಕೆ ಒಂದು ಪ್ರಯೋಗಶಾಲೆಯಂತೆ ಇರುವುದು ರಾಮಕೃಷ್ಣ ಮಿಷನ್. ಅವುಗಳಲ್ಲಿ ಮುಖ್ಯವಾದುವು ಇವು:

**ಮಹಾನ್ ಚಾರಿತ್ರ್ಯ ನಿರ್ಮಾಣ :** ಈ ಯುಗದ ಅವಶ್ಯಕತೆ ನಿಷ್ಕಲ್ಮಷ ವ್ಯಕ್ತಿತ್ವವುಳ್ಳ ಉದಾತ್ತ ಚಾರಿತ್ರ್ಯಗಳ ನಿರ್ಮಾಣ. ಅಂಥ ಶಕ್ತಿಶಾಲಿ, ನೈತಿಕ ಸ್ಥೈರ್ಯವುಳ್ಳ ವ್ಯಕ್ತಿಗಳನ್ನು ತಯಾರು ಮಾಡು

ವುದು ರಾಮಕೃಷ್ಣ ಮಿಷನ್ನಿನ ಆದರ್ಶಗಳಲ್ಲಿ ಒಂದು. ಅಂಥವರು ಪರಿಣಾಮಕಾರಿ ಆದರ್ಶವಾದದ ಜೊತೆಜೊತೆಗೆ ಉತ್ಕಟವಾದ ಪ್ರಾಯೋಗಿಕತೆಯನ್ನೂ ಬೆಳೆಸಿಕೊಳ್ಳಬೇಕು. ಈ ರೀತಿಯ ಕಾರ್ಯ ವಿಧಾನಕ್ಕೆ ರಾಮಕೃಷ್ಣ ಮಿಷನ್ನಿನಲ್ಲಿ ಬಹಳ ಮಹತ್ವವನ್ನು ನೀಡ ಲಾಗುತ್ತದೆ. ಇದೇ ರೀತಿ ಒಬ್ಬನು ತನ್ನ ಮೋಕ್ಷಕ್ಕಾಗಿ ಮಾತ್ರ ಪ್ರಯ ತ್ನಿಸಬಾರದು. ಇದು ಸ್ವಾರ್ಥಜೀವನ. ಇದನ್ನು ಮೀರಿಹೋಗಿ, ಜಗತ್ತಿನ ಜನರ ಸೇವೆಮಾಡುವುದೇ ನಿಜವಾದ ಆಧ್ಯಾತ್ಮಿಕ ಪ್ರಗತಿಗೆ ಕಾರಣವಾಗುತ್ತದೆ. ಇದೇ ಉದಾತ್ತ ಚಾರಿತ್ರ್ಯ ನಿರ್ಮಾಣದ ರೀತಿ. ಇದನ್ನು ರಾಮಕೃಷ್ಣ ಮಿಷನ್ ಬೋಧಿಸುತ್ತದೆ.

**ವ್ಯಕ್ತಿಜೀವನದ ಪರಿವರ್ತನೆ :** ರಾಮಕೃಷ್ಣ ಮಿಷನ್ನಿನ ಸೇವಾ ಕಾರ್ಯಗಳು ಲೌಕಿಕ ರೀತಿಯ ಸಹಾಯವನ್ನು ಮಾತ್ರವೇ ನೀಡು ತ್ತಿಲ್ಲ. ಇದರ ಕಾರ್ಯದ ವಿಧಿವಿಧಾನಗಳಿಂದ ಮತ್ತು ಮಿಷನ್ನಿನ ಪೂಜ್ಯ ಸಂನ್ಯಾಸಿಗಳ ಆದರ್ಶ ಜೀವನದಿಂದ ಲಕ್ಷಗಟ್ಟಲೆ ಜನರು ಪ್ರಭಾವಿತರಾಗಿದ್ದಾರೆ. ಅವರು ತಮ್ಮ ಲೌಕಿಕ ಜೀವನವನ್ನು, ಪ್ರಾಪಂ ಚಿಕ ಪರಿಸರದ ನಡುವೆಯೂ, ಆಧ್ಯಾತ್ಮಿಕ ಜೀವನವನ್ನಾಗಿ ಪರಿ ವರ್ತಿಸಿಕೊಂಡಿದ್ದಾರೆ. ಸೇವಾಮನೋಭಾವ, ಭಕ್ತಿಭಾವನೆ, ಜ್ಞಾನ ಮತ್ತು ಧ್ಯಾನಗಳನ್ನು ತಮ್ಮ ಜೀವನದಲ್ಲಿ ಮೈಗೂಡಿಸಿಕೊಂಡಿದ್ದಾರೆ. ಜನಸಾಮಾನ್ಯರ ಜೀವನವನ್ನು ಆಧ್ಯಾತ್ಮಿಕಮಯವಾಗಿ ಪರಿವರ್ತಿಸಿ ಕೊಳ್ಳುವುದಕ್ಕೆ ಹೀಗೆ ರಾಮಕೃಷ್ಣ ಮಿಷನ್ ಸಹಾಯ ಮಾಡುತ್ತಿದೆ.

**ಸರ್ವಾಂಗೀಣ ವ್ಯಕ್ತಿತ್ವ :** ಸ್ವಾಮಿ ವಿವೇಕಾನಂದರು, ಸಾಧಕನು ಕರ್ಮ, ಭಕ್ತಿ, ಜ್ಞಾನ ಮತ್ತು ಧ್ಯಾನ – ಈ ಎಲ್ಲ ಯೋಗಗಳ ಸಮ ನ್ವಯವನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳುತ್ತಿದ್ದರು. ಇದರ ಪ್ರತ್ಯಕ್ಷ ಅಳವಡಿಕೆಯನ್ನು ರಾಮಕೃಷ್ಣ ಮಿಷನ್ನಿನಲ್ಲಿ ನೋಡುತ್ತೇವೆ. ಶ್ರೀರಾಮಕೃಷ್ಣರು ಎಲ್ಲ ಯೋಗಗಳ ಸಮನ್ವಯಾಚಾರ್ಯರಾಗಿದ್ದರು. ಅವರು ಹಾಕಿಕೊಟ್ಟ ದಾರಿಯ ಲ್ಲಿಯೇ ನಡೆದು ನಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು ಎಂದು ಸ್ವಾಮಿ ವಿವೇಕಾನಂದರು ಮಿಷನ್ನಿನ ರೀತಿರಿವಾಜುಗಳಲ್ಲಿ ಸ್ಪಷ್ಟ ವಾಗಿ ಆದೇಶಿಸಿದ್ದಾರೆ.

**ನೈಜ ರಚನಾತ್ಮಕ ಕಾರ್ಯ :** ರಾಮಕೃಷ್ಣ ಮಿಷನ್ ಕಾರ್ಯ ದಲ್ಲಿ ನಿಪುಣತೆಗೆ ಮತ್ತು ದಕ್ಷತೆಗೆ ಹೆಸರಾಗಿದೆ. ಇಲ್ಲಿ ಕಾರ್ಯದ ಉದ್ದೇಶ ಅತ್ಯಂತ ಉದಾತ್ತವಾಗಿರುತ್ತದೆ. ಇದರ ಜೊತೆಗೆ, ಕೆಲಸ ಕಾರ್ಯಗಳಲ್ಲಿ ನೈಜ ರಚನಾತ್ಮಕತೆ ಕಾಣಸಿಗುತ್ತದೆ. ಇದಕ್ಕೆ ಸ್ವಾಮಿ ವಿವೇಕಾನಂದರೇ ಅಡಿಪಾಯವನ್ನು ಹಾಕಿದರು. ಇದೇ ನಿಜವಾದ ಕರ್ಮಯೋಗದ ಆದರ್ಶ. ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರಾದ ಸ್ವಾಮಿ ಶಾರದಾನಂದರು ರಾಮಕೃಷ್ಣ ಮಿಷನ್ ಕೈಗೊಂಡಿರುವ ಕರ್ಮಯೋಗದ ಆದರ್ಶದ ಬಗ್ಗೆ ಹೀಗೆ ಸುಂದರವಾಗಿ ಹೇಳು ತ್ತಾರೆ: ''ಒಬ್ಬ ನೈಜ ಕರ್ಮಯೋಗಿಯು, ಎಮರ್‌ಸನ್ ಹೇಳು ವಂತೆ, ತನ್ನ ಶಿರವನ್ನು (ಬುದ್ಧಿ) ಏಕಾಂತದಲ್ಲಿ ಇಡಬೇಕು. ಹಾಗೆಯೇ ತನ್ನ ಕೈಯನ್ನು (ಕರ್ಮ) ಸಮಾಜದಲ್ಲಿ ತೊಡಗಿಸಬೇಕು. ಇದೇ ರಾಮಕೃಷ್ಣ ಮಿಷನ್ನಿನ ಕಾರ್ಯಚಟುವಟಿಕೆಗಳ ಲಕ್ಷಣ.''

**ತೇಜೋವಂತ ಸಮುದಾಯ:** ಶ್ರೀರಾಮಕೃಷ್ಣರು ತಮ್ಮ ಸಾಧನೆ ಗಳ ನಂತರ, ತಾವು ತಮ್ಮ ಅವತಾರದ ಅವಧಿಯಲ್ಲಿ ಕೈಗೊಳ್ಳ ಬೇಕಾದ ಕೆಲವು ಜೀವನ ಧ್ಯೇಯಗಳನ್ನು ಕಂಡುಕೊಂಡರು. ಅವು ಗಳಲ್ಲಿ ಒಂದು: ಆಧ್ಯಾತ್ಮಿಕ ಸುಸಂಪನ್ನರಾದ ವ್ಯಕ್ತಿಗಳ ಒಂದು ಸಮುದಾಯವನ್ನು ಹುಟ್ಟುಹಾಕುವುದು. ಇದು ಈಗ ರಾಮಕೃಷ್ಣ ಮಿಷನ್ನಿನ ರೂಪದಲ್ಲಿ ಸಾಕಾರವಾಗಿದೆ; ಒಂದು ಬೃಹದ್ ಸಂಸ್ಥೆಯ ಸ್ವರೂಪವನ್ನು ಪಡೆದುಕೊಂಡಿದೆ. ಇದರ ಪ್ರತಿಯೊಬ್ಬ ಸದಸ್ಯರೂ ಶ್ರೀರಾಮಕೃಷ್ಣರಲ್ಲಿ ಅಪಾರ ಪ್ರೇಮವನ್ನು ಬೆಳೆಸಿಕೊಳ್ಳುತ್ತಾರೆ. ಇದೇ ಈ ಸಮುದಾಯದ ಐಕ್ಯತೆಯನ್ನು ಕಾಪಾಡಿಕೊಂಡಿರುವ ಸೂತ್ರವಾಗಿದೆ. ದಿವ್ಯತ್ರಯರ ಮತ್ತು ಅವರ ಪ್ರತ್ಯಕ್ಷ ಶಿಷ್ಯರ ಅಪಾರ ಪ್ರೇಮಧಾರೆ ಈ ಮಹಾಸಂಘದಲ್ಲೆಲ್ಲ ಹರಿದು, ಇದರ ಪ್ರಾಣ ದಾಯಕ ಗಂಗೆಯಾಗಿದೆ. ಈ ಸಂಘದ ಪ್ರತಿಯೊಬ್ಬ ಸದಸ್ಯ ನಲ್ಲಿಯೂ ಇದು ಸಮರ್ಪಣಾ ಭಾವ ಮತ್ತು ಪ್ರೇಮಪೂರಿತ ಸೇವೆಯ ರೂಪದಲ್ಲಿ ವ್ಯಕ್ತವಾಗುತ್ತಲಿದೆ.

**ಆದರ್ಶ ಗುಣಗಳ ಆಗರ :** ಶ್ರೀರಾಮಕೃಷ್ಣರು ಸನಾತನ ಧರ್ಮದ ಉದಾತ್ತ ಗುಣಗಳಾದ ಶ್ರದ್ಧೆ, ಆಧ್ಯಾತ್ಮಿಕ ಸಾಧನೆ, ಬ್ರಹ್ಮ ಚರ್ಯ ಮತ್ತು ಭಗವತ್ ಸಾಕ್ಷಾತ್ಕಾರಗಳನ್ನು ತಮ್ಮ ಜೀವನದಲ್ಲಿ ಮೈಗೂಡಿಸಿಕೊಂಡಿದ್ದರು. ಇವೆಲ್ಲವನ್ನೂ ರಾಮಕೃಷ್ಣ ಮಿಷನ್ನಿನ ಸಂನ್ಯಾಸಿಗಳು ಕೂಡ ತಮ್ಮ ಶಕ್ತಿಸಾಮರ್ಥ್ಯಗಳಿಗೆ ಅನುಗುಣವಾಗಿ ಕರಗತಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ರಾಮಕೃಷ್ಣ ಮಿಷನ್ನಿನ ಅಧಿಕೃತ ವೆಬ್‌ಸೈಟಿನಲ್ಲಿ ರಾಮಕೃಷ್ಣ ಮಿಷನ್ ಪ್ರತಿನಿಧಿಸುವ ಇನ್ನೂ ಹಲವು ಉದಾತ್ತ ಗುಣಗಳನ್ನು ಪಟ್ಟಿಮಾಡಿ ಕೊಡಲಾಗಿದೆ. ಅವುಗಳೆಂದರೆ :

೧. ನಿಃಸ್ವಾರ್ಥತೆ, ತ್ಯಾಗ ಮನೋಭಾವ ಮತ್ತು ಪರಿಶುದ್ಧ ಪ್ರೇಮ
೨. ಸ್ವಾತಂತ್ರ್ಯ, ಸಮಾನತೆ, ಸೋದರ ಮನೋಭಾವ
೩. ಉತ್ಕೃಷ್ಟತೆ, ಕಾರ್ಯ ನಿಪುಣತೆ, ಗುಂಪಿನಲ್ಲಿ ಕಾರ್ಯಮಾಡುವ ಪ್ರಜ್ಞೆ
೪. ರಾಜಕೀಯ ರಹಿತವಾದ ಸಾಮಾಜಿಕ ಕಳಕಳಿ

## ಉಪಸಂಹಾರ

ರಾಮಕೃಷ್ಣ ಮಿಷನ್ನಿನ ಶಾಖೆಗಳಲ್ಲದೆ, ಈ ಮಹಾನ್ ಸಂಸ್ಥೆಯ ಆದರ್ಶಗಳಿಂದ ರೂಪಿತವಾದ ನೂರಾರು ಆಶ್ರಮಗಳು ಅನೇಕ ಅನೇಕ ಸೇವಾಕಾರ್ಯಗಳನ್ನು ನಡೆಸುತ್ತಿವೆ. ಇವುಗಳಿಂದಲೂ ಮತ್ತಷ್ಟು ಜನರು ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದಾರೆ. ಇದ ಲ್ಲದೆ, ಕಳೆದ ನೂರು ವರ್ಷಗಳಿಂದ ಸಾಂಪ್ರದಾಯಿಕ ಮಠಮಾನ್ಯ ಗಳು ಕೂಡ ಶೈಕ್ಷಣಿಕ ಮತ್ತು ಸೇವಾ ಕೇಂದ್ರಗಳಾಗಿ ರೂಪುಗೊಂಡಿವೆ. ಈ ಸಕಾರಾತ್ಮಕ ಪರಿವರ್ತನೆಗೆ ರಾಮಕೃಷ್ಣ ಮಿಷನ್ನಿನ ಸಂನ್ಯಾಸಿಗಳು ಮೊದಮೊದಲು ಕೈಗೊಂಡ ಸೇವಾಕಾರ್ಯಗಳ ಪ್ರಭಾವವೇ ಕಾರಣ ಎನ್ನುವುದು ನಿರ್ವಿವಾದ. ಹೀಗಾಗಿ ಒಟ್ಟಾರೆ ಭಾರತವಲ್ಲದೆ, ಇಡೀ ಪ್ರಪಂಚದಲ್ಲಿ ರಾಮಕೃಷ್ಣ ಮಿಷನ್ ಒಂದು ನೀರವ ಆಧ್ಯಾತ್ಮಿಕ ಕ್ರಾಂತಿಯನ್ನೇ ಕೈಗೊಂಡಿದೆ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ✽